KACD310000502023

Presented on : 10.01.2023
Registered on : 10.01.2023
Decided on : 02.04.2026
Duration : 03y/02m/23days

## ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ,ಹಿರಿಯೂರು.

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 13/2023**

**ದಿನಾಂಕಃ 02 ನೇ ಏಪ್ರಿಲ್ – 2026.**

**ಪಿರ್ಯಾದಿ** ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು
(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

**ಆರೋಪಿತರು** ಃ **ಕೃಷ್ಣಸಾಗರ್ ವಿಶ್ವಂಬರ್ ಕೃಷ್ಣಾವತ್**
ತಂದೆ ಕೃಷ್ಣಸಾಗರ್ ಕೃಷ್ಣನಾಥ್, 36 ವರ್ಷ,
ಎಂ.ಹೆಚ್.45.ಎ.ಎಲ್.6367 ಕಾರು ಚಾಲಕ
ವಾಸಃ ಶೆಂಡೆಚಿಂಚ್ ಗ್ರಾಮ, ಮಲ್ಶಿರಾಸ್ ತಾಲ್ಲೂಕು,
ಸೊಲ್ಲಾಪುರ ಜಿಲ್ಲೆ ಮಹಾರಾಷ್ಟ್ರ–413113

(ಆರೋಪಿತರ ಪರವಾಗಿಃ ಶ್ರೀ ವೆ.ಆರ್.ಕೆ ವಕೀಲರು)

ಆರೋಪಿಸಲ್ಪಟ್ಟ ಅಪಾದನೆ ಃ ಭಾ.ದಂ.ಸಂ. ಕಲಂ 279, 337, 338, 304(ಎ)
ಭಾ.ಮೋ. ಕಾಯ್ದೆ ಕಲಂ 181,

ಆರೋಪದ ದಿನಾಂಕ ಃ 04.08.2022

SUJATHA SUVARNA B
Digitally signed by SUJATHA SUVARNA B
Date: 2026.04.08 15:48:09 +0530

| | | |
|---|---|---|
| ಆರೋಪ ದಾಖಲಾದ ದಿನಾಂಕ | ಃ | **04.08.2022** |
| ಸಾಕ್ಷ್ಯ ಪ್ರಾರಂಭದ ದಿನಾಂಕ | ಃ | **07.11.2023** |
| ಸಾಕ್ಷ್ಯ ಮುಕ್ತಾಯ ಗೊಂಡ ದಿನಾಂಕ | ಃ | **15.01.2025** |
| ತೀರ್ಪು ಘೋಷಿಸಿದ ದಿನಾಂಕ | ಃ | **02.04.2026** |
| ನ್ಯಾಯಾಧೀಶರ ನಿರ್ಣಯ | ಃ | ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ತೀರ್ಪು**

ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ ನಿರೀಕ್ಷಕರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ **279, 337, 338, 304**(ಎ) ಹಾಗೂ ಭಾರತೀಯ ಮೋಟರ್ ಕಾಯ್ದೆ ಕಲಂ **3** ಸಹವಾಚಕ **181** ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾನೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿರುತ್ತವೆ.

ದಿನಾಂಕ 04.08.2022 ರಂದು ಮುಂಜಾನೆ 5.20 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಆನೇಸಿದ್ರಿ ಗೇಟ್ ಸಮಿಪವಿರುವ ಶ್ರೀ ಶನೇಶ್ವರ ದೇವಸ್ಥಾನದ ಮುಂದಿನ ಹಿರಿಯೂರು – ಬೆಂಗಳೂರು ಎನ್.ಹೆಚ್.4 ರಸ್ತೆಯಲ್ಲಿ ಆರೋಪಿಯು ವಾಹನದ ಚಾಲನಾ ಪರವಾನಿಗೆ ಇಲ್ಲದೇ ಅವರ ಬಾಬ್ತು ಎಂ.ಹೆಚ್.45.ಎ ಎಲ್.6367 ನೇ ಕಾರನ್ನು ಹಿರಿಯೂರು ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬದಿಯ ಸೇತುವೆಯ ಗೋಡೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಕಾರು ಜಖಂಗೊಂಡಿದ್ದು

ಕಾರಿನಲ್ಲಿದ್ದ ಪಾಂಡುರಂಗ ಕ್ಷೀರಸಾಗರ್ ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಚಾಸಾ.1 ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯಗಳಾಗಿದ್ದು ಹಾಗೂ ಆರೋಪಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ ಎಂದು ಪಿರ್ಯಾದಿದಾರರು ದೂರು ನೀಡಿದ್ದು, ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿಯ ಭಾ.ದಂ.ಸಂಹಿತೆ ಕಲಂ 279, 337, 338, 304(ಎ) ಹಾಗೂ ಭಾರತೀಯ ಮೋಟರ್ ಕಾಯ್ದೆ ಕಲಂ 3 ಸಹವಾಚಕ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿರುತ್ತದೆ.

3. ನ್ಯಾಯಾಲಯವು ಆರೋಪಿತನ ಮೇಲೆ ಇರುವ ಅಪರಾಧದ ಬಗ್ಗೆ ಸಂಜ್ಞೆ ತೆಗೆದುಕೊಂಡಿದ್ದು ಆರೋಪಿತನಿಗೆ ಸಮನ್ಸ್ ಜಾರಿಯಾದ ನಂತರ ಅವರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅನ್ವಯ ಅಭಿಯೋಜನೆಯ ಈ ಪ್ರಕರಣದ ಸಮಸ್ತ ದಾಖಲೆಗಳನ್ನು ಆರೋಪಿಗೆ ನೀಡಲಾಯಿತು.

4. ನ್ಯಾಯಾಲಯವು ಆರೋಪಿಣೆಯನ್ನು ತಯಾರಿಸಿ ಆರೋಪಿತನಿಗೆ ಓದಿ ಹೇಳಲಾಯಿತು. ಆರೋಪಿತನು ಅದನ್ನು ಒಪ್ಪದೇ ವಿಚಾರಣೆಯಾಗಬೇಕೆಂದು ವಿನಂತಿಸಿಕೊಂಡಿದ್ದರಿಂದ ಈ ಪ್ರಕರಣವನ್ನು ವಿಚಾರಣೆ ಮಾಡಲು ಸಹಾಯಕ ಸರಕಾರಿ ಅಭಿಯೋಜನೆಯವರಿಗೆ ಅವಕಾಶ ಮಾಡಿಕೊಡಲಾಯಿತು.

5. ಅಭಿಯೋಜನಾ ಪಕ್ಷದವರು ತಮ್ಮ ಈ ಪ್ರಕರಣದ ಸಮರ್ಥನೆಗಾಗಿ ಚಾಸಾ–1 ರಿಂದ 16 ರ ಪೈಕಿ ಚಾಸಾ.1, 2, 3, 4, 16, 15, 9 ಮತ್ತು 10 ರವರನ್ನು ಪ್ರಾಸಾ.1 ರಿಂದ ಪ್ರಾಸಾ.8

ರಂತೆ ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ನಿಪಿ.1 ರಿಂದ ನಿಪಿ.15 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆ ಸಾಕ್ಷಿಗಳು ಮುಕ್ತಾಯವಾದ ನಂತರ ದಂ.ಪ್ರ.ಸಂ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತನು ಸಾಕ್ಷಿಯಲ್ಲಿಯ ಅಂಶಗಳನ್ನು ನಿರಾಕರಿಸಿ ತನ್ನ ಪರವಾಗಿ ಯಾವುದೇ ಸಾಕ್ಷಿ ಇಲ್ಲವೆಂದು ವಿನಂತಿಸಿಕೊಂಡರು. ಆರೋಪಿ ಅಭಿಯೋಜನೆಯವರ ವಿರುದ್ಧ ಹಾಜರುಪಡಿಸಿದ ಸಾಕ್ಷ್ಯದಾರಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ, ಆದರೆ ತನ್ನ ಪರವಾಗಿ ಯಾವ ರಕ್ಷಣಾತ್ಮಕ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

6. ಅಭಿಯೋಜನಾ ಪಕ್ಷದವರ ಪರ ಹಾಗೂ ಆರೋಪಿ ಪರ ವಾದವನ್ನು ಕೇಳಲಾಯಿತು.

7. ಸಾಕ್ಷಿದಾರರ ಹೇಳಿಕೆ ಹಾಗೂ ವಕೀಲರ ವಾದ ಈ ಎಲ್ಲಾ ವಿಷಯವನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ನ್ಯಾಯಾಲಯದ ಅವಗಾಹನೆಗೆ ಮೂಡಿ ಬಂದಿರುತ್ತದೆ.

1. ಅಭಿಯೋಜನೆಯವರು ದಿನಾಂಕ 04.08.2022 ರಂದು ಮುಂಜಾನೆ 5.20 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಆನೇಸಿದ್ರಿ ಗೇಟ್ ಸಮಿಪವಿರುವ ಶ್ರೀ ಶನೇಶ್ವರ ದೇವಸ್ಥಾನದ ಮುಂದಿನ ಹಿರಿಯೂರು – ಬೆಂಗಳೂರು ಎನ್.ಹೆಚ್.4 ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಎಂ.ಹೆಚ್.45.ಎ ಎಲ್.6367 ನೇ ಕಾರನ್ನು ಹಿರಿಯೂರು ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಬದಿಯ ಸೇತುವೆಯ ಗೋಡೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಕಾರು ಜಖಂಗೊಂಡಿದ್ದು ಆದ್ದರಿಂದ ಭಾ.ದಂ.ಸಂ.ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

2. ಅಭಿಯೋಜನೆಯು, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿಯು ತಮ್ಮ ಬಾಬ್ತು ಕಾರನ್ನು ಅತಿವೇಗ ಮತ್ತು

ಅಜಾಗರುಾಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬದಿಯ ಸೇತುವೆಯ ಗೋಡೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಕಾರಿನಲ್ಲಿದ್ದ ಪಾಂಡುರಂಗ ಕ್ಷೀರಸಾಗರ್ ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆಂದು ಆದ್ದರಿಂದ ಭಾ.ದಂ.ಸಂ.ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

3. ಅಭಿಯೋಜನೆಯು, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿಯು ತಮ್ಮ ಬಾಬ್ತು ಕಾರನ್ನು ಅತಿವೇಗ ಮತ್ತು ಅಜಾಗರುಾಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬದಿಯ ಸೇತುವೆಯ ಗೋಡೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಚಾಸಾ.1 ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಪೆಟ್ಟುಗಳು ಬಿದ್ದು ತೀವ್ರ ಸ್ವರೂಪದ ಗಾಯಗಳಾಗಿದ್ದು ಮತ್ತು ಆರೋಪಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆದ್ದರಿಂದ ಭಾ.ದಂ.ಸಂ.ಕಲಂ 337, 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

4. ಅಭಿಯೋಜನೆಯು, ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿಯು ಚಾಲನಾ ಪರವಾನಿಗೆ ಇಲ್ಲದೆ ಕಾರನ್ನು ಅತಿವೇಗ ಮತ್ತು ಅಜಾಗೂರುಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿದ್ದು ಆದ್ದರಿಂದ ಭಾ.ಮೋ.ವಾ.ಕಾ.ಕಲಂ 3 ರೆ/ವಿ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುವರೇ?

5. ಆದೇಶ ಏನು?

8. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ–

ಅಂಶ ನಂ.1 ರಿಂದ 3 ಃ ನಕಾರಾತ್ಮಕವಾಗಿ
ಅಂಶ ನಂ. 4 ಃ ಸಕಾರಾತ್ಮಕವಾಗಿ
ಅಂಶ ನಂ.5 ಃ ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ

**ಃಃಕಾರಣಗಳುಃಃ**

**ಅಂಶ ನಂ.1 ರಿಂದ 3 ಃ** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

9. ಅಭಿಯೋಜನೆಯವರು ಚಾಸಾ.1 ರವರನ್ನು ಫ್ರಾಸಾ.1 ಎಂದು, ಚಾಸಾ.2 ರವರನ್ನು ಫ್ರಾಸಾ.2 ಎಂದು, ಚಾಸಾ.3 ರವರನ್ನು ಫ್ರಾಸಾ.3 ಎಂದು, ಚಾಸಾ.4 ರವರನ್ನು ಫ್ರಾಸಾ.4 ಎಂದು, ಚಾಸಾ.16 ರವರನ್ನು ಫ್ರಾಸಾ.5 ಎಂದು, ಚಾಸಾ.15 ರವರನ್ನು ಫ್ರಾಸಾ.6, ಚಾಸಾ.9 ರವರನ್ನು ಫ್ರಾಸಾ.7 ಹಾಗೂ ಚಾಸಾ.10 ರವರನ್ನು ಫ್ರಾಸಾ.8 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ಹಾಗೂ ನಿ.ಪಿ–1 ದೂರು, ನಿ.ಪಿ–1(ಎ) ಫ್ರಾಸಾ.1 ರವರ ಸಹಿ, ನಿ.ಪಿ–1(ಬಿ) ಫ್ರಾಸಾ.6 ರವರ ಸಹಿ, ನಿ.ಪಿ–2 ಸ್ಥಳ ಮಹಜರ್, ನಿ.ಪಿ–2(ಎ) ಫ್ರಾಸಾ.2 ರವರ ಸಹಿ, ನಿ.ಪಿ–2(ಬಿ) ಫ್ರಾಸಾ.3 ರವರ ಸಹಿ, ನಿ.ಪಿ–2(ಸಿ) ಫ್ರಾಸಾ.4 ರವರ ಸಹಿ , ನಿ.ಪಿ–2(ಡಿ) ಫ್ರಾಸಾ.6 ರವರ ಸಹಿ, ನಿ.ಪಿ–3 ಕಚ್ಚಾ ನಕಾಶೆ, ನಿ.ಪಿ–3(ಎ) ಫ್ರಾಸಾ.2 ರವರ ಸಹಿ, ನಿ.ಪಿ–3(ಬಿ ) ಫ್ರಾಸಾ.3 ರವರ ಸಹಿ, ನಿ.ಪಿ–3(ಸಿ) ಫ್ರಾಸಾ.4 ರವರ ಸಹಿ, ನಿ.ಪಿ–3(ಡಿ) ಫ್ರಾಸಾ.6 ರವರ ಸಹಿ, ನಿ.ಪಿ–4 ಪೊಟೋ , ನಿ.ಪಿ–5 ಫ್ರಾಸಾ.2 ರವರ ಹೇಳಿಕೆ , ನಿ.ಪಿ–6 ಶವ ಪಂಚನಾಮೆ , ನಿ.ಪಿ–6(ಎ) ಫ್ರಾಸಾ.5 ರವರ ಸಹಿ , ನಿ.ಪಿ–7 ಶವ ಪರೀಕ್ಷಾ ವರದಿ, ನಿ.ಪಿ–7(ಎ) ಫ್ರಾಸಾ.5 ರವರ ಸಹಿ , ನಿ.ಪಿ–8 ಐ.ಎಂ.ವಿ ವರದಿ, ನಿ.ಪಿ–8(ಎ) ಫ್ರಾಸಾ.5 ರವರ ಸಹಿಯಾಗಿರುತ್ತದೆ.

ನಿ.ಪಿ–9 ಗಾಯದ ಪ್ರಮಾಣ ಪತ್ರ, ನಿ.ಪಿ–9(ಎ) ಫ್ರಾಸಾ.5 ರವರ ಸಹಿ , ನಿ.ಪಿ–10 ಗಾಯದ ಪ್ರಮಾಣ ಪತ್ರ, ನಿ.ಪಿ–10(ಎ) ಫ್ರಾಸಾ.5 ರವರ ಸಹಿ, ನಿ.ಪಿ–11 ಕಲಂ 133 ನೊಟೀಸ್, ನಿ.ಪಿ–11(ಎ) ಫ್ರಾಸಾ.5 ರವರ ಸಹಿ, ನಿ.ಪಿ–12 ನೊಟೀಸ್ ಗೆ ಉತ್ತರ, ನಿ.ಪಿ–

12(ಎ) ಫ್ರಾಸಾ.5 ರವರ ಸಹಿ, ನಿ.ಪಿ–13 ಇಂಡಿಮ್ನಿಟಿ ಬಾಂಡ್, ನಿ.ಪಿ–13(ಎ) ಫ್ರಾಸಾ.5 ರವರ ಸಹಿ, ನಿ.ಪಿ–14 ವಾಹನ ಅಮಾನತ್ತು ಪಂಚನಾಮೆ, ನಿ.ಪಿ–14(ಎ) ಫ್ರಾಸಾ.5 ರವರ ಸಹಿ , ನಿ.ಪಿ–14(ಬಿ ) ಫ್ರಾಸಾ.7 ರವರ ಸಹಿ, ನಿ.ಪಿ–14(ಸಿ ) ಫ್ರಾಸಾ.8 ರವರ ಸಹಿ , ನಿ.ಪಿ–15 ಪ್ರ.ವ ವರದಿ, ನಿ.ಪಿ–15(ಎ) ಫ್ರಾಸಾ.6 ರವರ ಸಹಿ ಆಗಿರುತ್ತದೆ.

ಕಲಂ 279 ಮತ್ತು ಕಲಂ 337 ಮತ್ತು 338 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯು ಮನುಷ್ಯನ ಪ್ರಾಣಕ್ಕೆ ಅಪಾಯವಾಗುವಂತೆ ಅಥವಾ ಯಾವನೆ ಇತರೇ ವ್ಯಕ್ತಿಗೆ ಗಾಯ ಮತ್ತು ಕೃತ್ಯವನ್ನುಂಟುಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷದಿಂದ ವಾಹನ ನಡೆಸಿ ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯವನ್ನು ಯಾವುದಾದರು ವ್ಯಕ್ತಿಗೆ ಉಂಟು ಮಾಡಿದಲ್ಲಿ ಅವನು ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಹಾಗೂ ಕಲಂ 304(ಎ) ಪ್ರಕಾರ ಈ ರೀತಿ ದುಡುಕು ಅಥವಾ ನಿರ್ಲಕ್ಷದಿಂದ ಇತರ ವೈಯಕ್ತಿಕ ಸುರಕ್ಷತೆಗೆ ಅಪಾಯ ಉಂಟುಮಾಡಿ ಯಾವುದೇ ವ್ಯಕ್ತಿಯ ಮರಣ ಉಂಟು ಮಾಡಿದ್ದಲ್ಲಿ ಶಿಕ್ಷೆಗೆ ಒಳಪಡಬೇಕಾಗುತ್ತದೆ.

10. ಈ ಪ್ರಕರಣದಲ್ಲಿ ಚಾಸಾ.1/ಫ್ರಾಸಾ.1 ಚೇತನ್ ರಾಮದಾಸ್ ರಾವ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಪಾಂಡುರಂಗ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆಂದು ಅಂದಾಜು 1 ವರ್ಷದ ಹಿಂದೆ ಅವರು ಮತ್ತು ಪಾಂಡುರಂಗ ಇಬ್ಬರು ಸೇರಿ ಹುಂಡೈಯ್ ಕಾರಿನಲ್ಲಿ ಅವರು ಊರಿನಿಂದ ಚೆನ್ನೈಗೆ ಹೋಗುತ್ತಿದ್ದರೆಂದು ರಾ.ಹೆದ್ದಾರಿ –4 ರ ಮೇಲೆ ಹಿರಿಯೂರು ದಾಟಿ ಸ್ವಲ್ಪ ದೂರ ಹೋದಾಗ ಅವರ ಕಾರ್ ಅಪಘಾತಾಕ್ಕೀಡಾಯಿತೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**11.** ಚಾಸಾ.3/ಪ್ರಾಸಾ.3 ರಾಮಕೃಷ್ಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2, 3 ರ ದಾಖಲೆಗಳಿಗೆ 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಈ ದಾಖಲಾತಿಗಳಿಗೆ ಸಹಿ ಮಾಡಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**12.** ಚಾಸಾ.4/ಪ್ರಾಸಾ.4 ಮಹಲಿಂಗಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2, 3 ರ ದಾಖಲೆಗಳಿಗೆ ಅಂದಾಜು 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಅಪಘಾತವಾದ ಕಾರಣಕ್ಕೆ ಸಹಿ ಮಾಡಿರುತ್ತಾರೆಂದು ಪೊಲೀಸರು ಪಂಚನಾಮೆ ಮಾಡಿದ್ದು ಸಹಿ ಮಾಡಿ ಎಂದು ದಾಖಲೆಗೆ ಸಹಿ ಪಡೆದಿರುತ್ತಾರೆಂದು ನಿಪಿ.4 ರಂತೆ ಪೋಟೋದಲ್ಲಿ ಅವರು ಇದ್ದಾರೆಂದು ಅವರ ಪೋಟೊವನ್ನು ಶನೇಶ್ವರ ದೇವಸ್ಥಾನದ ಬಳಿ ತೆಗೆದಿರುತ್ತಾರೆಂದು ಪೊಲೀಸರು ಮಹಜರ್ ಮಾಡಿದ ಕಾಲಕ್ಕೆ ಸದರಿ ಪೋಟೋ ತೆಗೆದಿದ್ದಾರೆ ಎಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

**13.** ಚಾಸಾ.15/ಪ್ರಾಸಾ.6 ಲೊಕೇಶ್ ಹೆಚ್.ವಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 04.08.2022 ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ಹೆಚ್ ಸಿ 1367 ಗೌರೀಶ್ ರವರು ಹೇಳಿಕೆ ದೂರು ಪಡೆದು ಹಾಜರು ಪಡಿಸಿದ್ದು ಅದನ್ನು ಠಾಣಾ ಗುನ್ನಾ ನಂ.250/2022 ರಂತೆ ಪ್ರಕರಣ ದಾಖಲಿಸಿರುತ್ತಾರೆಂದು, ನಿಪಿ-15 ಪ್ರ ವ ವರದಿ ಯನ್ನು ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಂದು, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ.3, 4 ರವರ ಸಮಕ್ಷಮ ಸುಮಾರು 10 ರಿಂದ 11 ಗಂಟೆ ಸಮಯದಲ್ಲಿ ಚಾಸಾ.2 ರವರು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಎಂ ಹೆಚ್ 45 ಎ ಎಲ್ 6367 ನ್ನು ವಶಪಡಿಸಿಕೊಂಡಿರುತ್ತಾರೆಂದು, ನಿಪಿ-3 ರಂತೆ ನಕಾಶೆ ತಯಾರಿಸಿರುತ್ತಾರೆಂದು ನಿಪಿ-2, 3 ರಲ್ಲಿ ಆ ದಿನ ನಿಪಿ-4 ರ ಪೋಟೋವನ್ನು ಸ್ಥಳದಲ್ಲಿ

ತೆಗೆಸಿರುತ್ತಾರೆಂದು ನಂತರ ಠಾಣೆಗೆ ಬಂದು ಪಿ ಎಫ್ ಬರೆಸಿರುತ್ತಾರೆಂದು ನಂತರ ಮುಂದಿನ ತನಿಖೆಯನ್ನು ಚಾಸಾ.16 ರವರಿಗೆ ವಹಿಸಿಕೊಟ್ಟಿರುತ್ತಾರೆಂದು ತಮ್ಮ ಸಾಕ್ಷ್ಯನುಡಿರುತ್ತಾರೆ.

**14.** ಚಾಸಾ.16/ಫ್ರಾಸಾ.5 ಆನಂದ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 05.09.2022 ರಂದು ಈ ಪ್ರಕರಣದ ಕಡತವನ್ನು ಚಾಸಾ.15 ರವರಿಂದ ಪಡೆದುಕೊಂಡಿರುತ್ತಾರೆಂದು, ಹಿರಿಯೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಶವಾಗಾರದಿಂದ ಪಾಂಡುರಂಗ ಶಿವಸಾಗರ್ ರವರ ಶವ ತನಿಖೆಯನ್ನು ಚಾಸಾ.5, 6 ರವರ ಸಮಕ್ಷಮ ಬೆಳಿಗ್ಗೆ 6 ರಿಂದ 8 ರ ವರೆಗೆ ಕೈಗೊಂಡಿದ್ದು ಆ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ.7, 8 ರವರ ಹೇಳಿಕೆ ಪಡೆದಿರುತ್ತಾರೆಂದು ನಿಪಿ–6 ಶವ ಪಂಚನಾಮೆ ಎಂದು ತಮ್ಮ ಸಾಕ್ಷ್ಯ ನುಡಿರುತ್ತಾರೆ.

**15.** ಚಾಸಾ.16/ಫ್ರಾಸಾ.5 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಅದೇ ದಿನ ಅಪಘಾತಕ್ಕೀಡಾದ ಕಾರನ್ನು ಪರಿಶೀಲಿಸಿ ವರದಿ ನೀಡಲು ಆರ್ ಟಿ ಒ ರವರಿಗೆ ಮನವಿ ಮಾಡಿರುತ್ತಾರೆಂದು ದಿಃ08.08.2022 ರಂದು ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ನಿಪಿ–7 ರಂತೆ ಮೃತ ಪಾಂಡುರಂಗ ಇವರ ಪಿ ಎಂ ವರದಿ ಸ್ವೀಕರಿಸಿದ್ದರೆಂದು ಅದೇ ದಿನ ಸಾಕ್ಷಿದಾರರಾದ ಚಾಸಾ.2 ರವರ ಹೇಳಿಕೆ ಪಡೆದಿರುತ್ತಾರೆಂದು ದಿಃ04.09.2022 ರಂದು ಆರ್ ಟಿ ಒ ರವರಿಂದ ಐ ಎಂ ವಿ ವರದಿ ಸ್ವೀಕರಿಸಿದ್ದಾರೆಂದು, ದಿಃ20.10.2022 ರಂದು ಅಪಘಾತಕ್ಕೀಡಾದ ಎಂ.ಹೆಚ್.45.ಎ.ಎಲ್.6367 ರ ಕಾರಿನ ಮಾಲೀಕರಿಗೆ ನಿಪಿ–11 ರಂತೆ ಕಲಂ 133 ರಂತೆ ನೋಟೀಸ್ ನೀಡಿ ಅವರಿಂದ ನಿಪಿ–12 ರಂತೆ ಉತ್ತರ ಪಡೆದಿದ್ದು ನಿಪಿ–13 ರಂತೆ ಇಂಡಿಮ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತಾರೆಂದು, ಉತ್ತರದಲ್ಲಿ ಆರೋಪಿಯು ಆ ದಿನ ವಾಹನ ಚಾಲನೆ ಮಾಡುತ್ತಿದ್ದರು ತಿಳಿಸಿರುತ್ತಾರೆಂದು, ನಿಪಿ.14 ರಂತೆ ವಾಹನ ಬಿಡುಗಡೆ ಪಂಚನಾಮೆ ಎಂದು ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತಾರೆಂದು, ಅದೇ ದಿನ ಆರೋಪಿ

ಚಾಲನಾ ಪರವಾನಿಗೆ ಇಲ್ಲದೆ ಚಾಲನೆ ಮಾಡಿದ್ದರಿಂದ ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆಂದು ತಮ್ಮ ಸಾಕ್ಷ್ಯನುಡಿರುತ್ತಾರೆ.

16. ಚಾಸಾ.1/ ಫ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರ ಕಾರು ಚಾಲಕ ಎಷ್ಟು ವೇಗದಲ್ಲಿ ಕಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಿಲ್ಲ, ಅಪಘಾತ ಎಷ್ಟು ಗಂಟೆಗೆ ಆಗಿದೆ ಎಂದು ಗೊತ್ತಿಲ್ಲ, ಯಾರ ತಪ್ಪಿನಿಂದ ಆಗಿದೆ ಎಂದರೆ ಗೊತ್ತಿಲ್ಲ ಪಾಂಡುರಂಗನಿಗೆ ಎಲ್ಲೆಲ್ಲಿ ಗಾಯಗಳಾಗಿದ್ದಾರೆ ಎಂದರೆ ಗೊತ್ತಿಲ್ಲ, ನಿಪಿ.1 ಬಿಳಿ ಹಾಳೆಯಾಗಿತ್ತು ಎಂದು ನುಡಿದಿರುತ್ತಾರೆ. ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ಸದರಿ ಕಾರು ಆರೋಪಿ ಕೃಷ್ಣಾವತ್ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ, ಅದೇ ರೀತಿ ಆರೋಪಿ ಸದರಿ ಕಾರನ್ನು ಹೆದ್ದಾರಿ ಮೇಲೆ ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿ ರಸ್ತೆ ಡಿವೈಡರ್ ಗೆ ಅಪಘಾತ ಪಡಿಸಿದ್ದಾನೆ ಎಂದರೆ ಸರಿಯಲ್ಲ ಅವರು ಆ ಸಮಯದಲ್ಲಿ ಮಲಗಿದ್ದರು ಸದರಿ ಅಪಘಾತದಲ್ಲಿ ಪಾಂಡರಂಗನಿಗೆ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲಿ ಮೃತ ಪಟ್ಟ ಎಂದರೆ ಸರಿಯಲ್ಲ ಸದರಿ ಅಪಘಾತವು ಆರೋಪಿಯು ಅತಿವೇಗ ಮತ್ತು ನಿರ್ಲಕ್ಷತನ ಕಾರು ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ ನಿಪಿ-1 ರಂತೆ ಅಪಘಾತದ ಬಗ್ಗೆ ಅವರು ಕೊಟ್ಟ ಮಾಹಿತಿಯಂತೆ ಬರೆದು ಆಸ್ಪತ್ರೆಯಲ್ಲಿ ಅವರ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ.

**17.** ಫ್ರಾಸಾ.2/ಚಾಸಾ.2 ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಅವರ ಸಮಕ್ಷಮ ಯಾವುದೇ ವಾಹನವನ್ನು ವಶಪಡಿಸಿಕೊಂಡಿಲ್ಲ ಸದರಿ ದಾಖಲಾತಿಗಳಿಗೆ ಸಹಿ ಮಾಡುವಾಗ ಬೇರೆ ಯಾರು ಸಹಿ ಮಾಡಿರುವುದಿಲ್ಲ ಆ ಎರಡು ದಾಖಲಾತಿಗಳಿಗೆ ಯಾವ ಕಾರಣಕ್ಕೆ ಸಹಿ ಮಾಡಿರುತ್ತಾರೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ ಅದರಲ್ಲಿ ಏನು ಬರೆದಿದ್ದಾರೆ ಎನ್ನುವುದು ಗೊತ್ತಿರುವುದಿಲ್ಲ, ಪೊಲೀಸರು ಸದರಿ ಪ್ರಕರಣದಲ್ಲಿ ಅವರಿಂದ ಯಾವುದೇ

ಹೇಳಿಕೆಯನ್ನು ಪಡೆದುಕೊಂಡಿಲ್ಲವೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿನಾಂಕ.04.08.2022 ರಂದು ಆನೆಸಿದ್ರಿ ಗೇಟ್ ಬಳಿ ಶನೇಶ್ವರ ದೇವಸ್ಥಾನದ ಮುಂದಿನ ಹಿರಿಯೂರು ಬೆಂಗಳೂರಿಗೆ ಹೋಗುವ ರಾ. ಹೆ. 4 ರಸ್ತೆಯ ಮೇಲೆ ವಾಹನ ಸಂಖ್ಯೆ ಎಂ ಹೆಚ್ –45 ಎಎಲ್ –6367 ರಸ್ತೆಯ ಪಕ್ಕದಲ್ಲಿನ ಬ್ರಿಡ್ಜ್ ಗೋಡೆಗೆ ಅಪಘಾತವಾಗಿ ಬಿದ್ದಿದ್ದು, ಪೊಲೀಸರು ಅವರ ಹಾಗೂ ಇಬ್ಬರು ಪಂಚರಾದ ಚಾಸಾ–3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 10–00 ರಿಂದ 11–00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ವಾಹನ ಅಮಾನತು ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೊಲೀಸರು ನಿಪಿ –3 ರಂತೆ ಸ್ಥಳ ನಕಾಶೆ ತಯಾರಿಸಿ ಮಹಜರ್ ಬರೆದ ಬಗ್ಗೆ ನಿಪಿ–4 ರಂತೆ ಪೋಟೋ ತೆಗೆದು ಸ್ಥಳದಲ್ಲಿಯೇ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ.

18. ಚಾಸಾ.3/ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಅವರ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಹಾಗೂ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ನಿಪಿ.2 ಮತ್ತು 3 ದಾಖಲಾತಿಗಳಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ04.08.2022 ಪೊಲೀಸರು ಎಂ.ಹೆಚ್–45.ಎಲ್.6367 ವಾಹನವನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10 ರಿಂದ 11 ರವರೆಗೆ ಆನೆಸಿದ್ರಿ ಗೇಟ್ ಬಳಿ ಮಹಜರ್ ಮಾಡಿ ಅವರ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿದ್ದು ಅವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದರೆ ಗೊತ್ತಿಲ್ಲ ಎಂದರೆ ನಿಜವೆಂದು ನುಡಿದಿರುತ್ತಾರೆ.

19. ಚಾಸಾ.4/ಪ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲವೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ04.08.2022 ರಂದು ಅಪಘಾತದ ಸ್ಥಳದಲ್ಲಿ ನಿಪಿ-2 ,3 ದಾಖಲೆಗಳಿಗೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲವೆಂದು, ಅವರ ಸಮಕ್ಷಮ ಪೊಲೀಸರು ವಾಹನ ನಂ.ಎಂ ಹೆಚ್ 45 ಎಲ್ 6367 ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10 ರಿಂದ 11 ರವರೆಗೆ ಆನೆಸ್ಕಿಡ್ರಿ ಗೇಟ್ ಬಳಿ ಮಹಜರ್ ಮಾಡಿ ಅವರ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲವೆಂದು ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ.

20. ಪ್ರಾಸಾ.7 ಮತ್ತು 8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.14 ಕ್ಕೆ ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದು ಅವರ ಸಮಕ್ಷಮ ಯಾವುದೇ ಕ್ರಮ ಜರುಗಿಸಿಲ್ಲ ಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿಲ್ಲ ಅವರ ಜೊತೆ ಯಾರು ಇರಲಿಲ್ಲ ಎಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿ ದಿಃ 20.10.2022 ರಂದು 4 ರಿಂದ 4.30 ರ ಸಮಯದಲ್ಲಿ ಅವರು ಹಾಗೂ ಚಾಸಾ.10 ರವರ ಸಮಕ್ಷಮ ಜವನಗೊಂಡನಹಳ್ಳಿ ಗ್ರಾಮದ ಪೊಲೀಸ್ ಉಪಠಾಣೆ ಮುಂದೆ ಪೊಲೀಸರು ನಿಪಿ-14 ರಂತೆ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಕಾರ್ ನಂ. ಎಂ ಹೆಚ್ 45 ಎಎಲ್ 6367 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲವೆಂದು ನುಡಿದಿರುತ್ತಾರೆ.

21. ಅಭಿಯೋಜನೆಯವರ ಪ್ರಕಾರ ಈ ಪ್ರಕರಣದಲ್ಲಿ ಚಾಸಾ.2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರು ಅಪಘಾತ ನೋಡಿಲ್ಲವೆಂದು ಅಪಘಾತ ಎಲ್ಲಿ ಮತ್ತು ಹೇಗಾಯಿತೆಂದು ಗೊತ್ತಿಲ್ಲವೆಂದು ಅವರ ಸಮಕ್ಷಮ ಪಂಚನಾಮೆಯನ್ನು ಮಾಡಿಲ್ಲವೆಂದು ನುಡಿದಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು

ಮಾಡಿದಾಗಲೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷವು ಹೊರಹೊಮ್ಮಿರುವುದಿಲ್ಲ. ಅಲ್ಲದೇ ಈ ಪ್ರಕರಣದಲ್ಲಿ ಚಾಸಾ.1 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಅವರನ್ನು ಅಭಿಯೋಜನೆಯವರು ಪಾಟೀ ಸವಾಲು ಮಾಡಿದಾಗ ಅವರು ಆದಿನ ಕ್ಷೀರಸಾಗರ ವಿಶ್ವಾಂಬರ್ ಕೃಷ್ಣಾವತ್ ಕಾರಲ್ಲಿ ಹೊಗುತ್ತಿದ್ದರು ಎಂದು ಒಪ್ಪಿಕೊಂಡಿದ್ದು ಆದರೆ ಆ ದಿನ ಆರೋಪಿ ಕ್ಷೀರಸಾಗರ ವಿಶ್ವಾಂಬರ್ ಕೃಷ್ಣಾವತ್ ಚಾಲನೆ ಮಾಡುತ್ತಿದ್ದರು ಎಂಬುದನ್ನು ಮತ್ತು ಆರೋಪಿ ಕಾರನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿ ರಸ್ತೆ ಡಿವೈಡರ್ ಗೆ ಅಪಘಾತ ಪಡಿಸಿದರು ಎಂಬುದನ್ನು ಅಲ್ಲಗಳೆದಿರುತ್ತಾರೆ ಹಾಗೂ ಮುಖ್ಯ ವಿಚಾರಣೆಯಲ್ಲಿ ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಅಭಿಯೋಜನೆಯವರು ಅಪಘಾತಕ್ಕೆ ಒಳಗಾದ ಕಾರನ್ನು ವಶಪಡಿಸಿಕೊಂಡಿರುವುದನ್ನು ಪುರಾವೆಗೊಳಿಸಲು ಪಂಚ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಂಡಿದ್ದರುೂ ಕೂಡ ಪಂಚಸಾಕ್ಷಿದಾರರು ಅಭಿಯೋಜನೆಗೆ ಸಂಪೂರ್ಣವಾದ ವ್ಯತಿರಿಕ್ತ ಸಾಕ್ಷವನ್ನು ನುಡಿದಿರುವುದಿಲ್ಲ .

22. ಪ್ರಾಸಾ.1 ರವರು ಆರೋಪಿಯು ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿರುತ್ತಾರೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ಆರೋಪಿ ಯಾವ ರೀತಿಯಾಗಿ ನಿರ್ಲಕ್ಷತನದಿಂದ ಮತ್ತು ದುಡುಕಿನಿಂದ ವಾಹನ ಚಾಲನೆ ಮಾಡಿ ಈ ಅಪಘಾತ ಪಡಿಸಿದ್ದಾರೆಂದು ಯಾವುದೇ ಒಬ್ಬ ಸಾಕ್ಷಿದಾರರು ಕೂಡ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಆರೋಪಿಯು ಕಾರನ್ನು ಆ ದಿನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಅಪಘಾತ ಪಡಿಸಿದ್ದಾರೆ ಎನ್ನುವ ಕುರಿತು ನ್ಯಾಯಾಲಯಕ್ಕೆ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಯಾವುದಾದರೂ ಸಂಶಯ ಬಂದಲ್ಲಿ ಅದರ ಲಾಭವು ಆರೋಪಿತರಿಗೆ ಸಲ್ಲತಕ್ಕದ್ದು ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಅಭಿಯೋಜನೆಯವರು 1 ನೇ ಆರೋಪಿಯ ವಿರುದ್ಧ ಹೊರಿಸಲಾದ ಆರೋಪವನ್ನು

ಸಂಶಯಾತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

23. **ಅಂಶ 4 ಃ** ಈ ಪ್ರಕರಣದಲ್ಲಿ ಆರೋಪಿಯು ಚಾಲನಾ ಪರವಾನಿಗೆ ಇಲ್ಲದೆ ಎಂ ಹೆಚ್.45.ಎಲ್.6367 ಕಾರು ಚಲಾಯಿಸಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಈ ಕುರಿತಂತೆ ತನಿಖಾಧಿಕಾಗಳು ಆರೋಪಿಯ ವಿರುದ್ಧ ಕಲಂ 3 ಸಹವಾಚಕ 181 ಮೋಟಾರ್ ವಾಹನಗಳ ಕಾಯ್ದೆ ಅಡಿ ಆರೋಪಿಯು ಕಾರನ್ನು ಚಲಾಯಿಸಿರುವುದರಿಂದ ತಪ್ಪಿತಸ್ಥ ಎಂದು ದೋಷಾರೋಪಣ ಪತ್ರವನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಮೋಟಾರ್ ವಾಹನಗಳ ಕಾಯ್ದೆ ಕಲಂ 3 ಸಹವಾಚಕ 181 ರ ಅಡಿ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿಯು ನಿರಾಕರಿಸಿರುವುದು ಕಂಡು ಬರುತ್ತದೆ. ಹಾಗೆಯೇ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆಯನ್ನು ದಾಖಲಿಸುವಾಗಲು ಸಹ ಅಭಿಯೋಜನೆಯ ತನಿಖಾಧಿಕಾರಿಯ ಸಾಕ್ಷ್ಯವನ್ನು ಆರೋಪಿಯ ವಿರುದ್ಧ ಆರೋಪ ಸಾಭೀತಾದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ಆರೋಪಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುವುದಾಗಿ ಪ್ರಶ್ನಿಸಿದಾಗಲು ಸಹ ಸುಳ್ಳು ಎಂದು ನುಡಿದಿರುವುದು ಕಂಡು ಬರುತ್ತದೆ.

24. ಎಂ.ಹೆಚ್.45.ಎ ಎಲ್.6367 ಕಾರನ್ನು ತನಗೆ ಚಾಲನೆ ಮಾಡಲು ಪರವಾನಗಿ ಇದೆ ಎಂಬ ಅಂಶವನ್ನು ಸಾಭೀತುಪಡಿಸುವ ಹೊಣೆಗಾರಿಕೆ ಆರೋಪಿಯ ಮೇಲೆ ಇರುತ್ತದೆ. ಆದಾಗ್ಯೂ ಆರೋಪಿಯು ಈ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಿರುವುದು ಕಂಡು ಬರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸದ ಕಾರಣ ಆರೋಪಿಯು ಅಭಿಯೋಜನೆಯು ಆರೋಪಿಸಿರುವಂತೆ ಕಾರನ್ನು ಚಲಾಯಿಸಲು ಸೂಕ್ತ ಚಾಲನ ಪರವಾನಿಗೆ ಹೊಂದಿರಲಿಲ್ಲ ಎಂದು ನಿಸ್ಸಂಶಯವಾಗಿ ಅಭಿಯೋಜನೆಯು ಸಾಭೀತುಪಡಿಸಿರುತ್ತದೆ ಎಂಬುದು

ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಅಂಶ-4 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

**25. ಅಂಶ ನಂ.5 :** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ **255(1)** ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) ರ ಅಡಿಯಲ್ಲಿ ಎಸಗಿದ ಆರೋಪಗಳಿಂದ ಆರೋಪಿಯನ್ನು ಖುಲಾಸೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ. 255(2)ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಯ ವಿರುದ್ಧ ಹೊರಿಸಿದ ಮೋಟಾರ್ ವಾಹನಗಳ ಕಾಯ್ದೆ ಕಲಂ 3 ಸಹವಾಚದ 181ರ ಆರೋಪಿತರಿಗೆ ಆರೋಪಿಯನ್ನು ದೋಷಿ ಎಂದು ಘೋಷಿಸಲಾಗಿದೆ.

ಮೋಟಾರು ವಾಹನಗಳ ಕಾಯ್ದೆ ಕಲಂ 3 ಸಹವಾಚದ 181 ರ ಅಡಿಯಲ್ಲಿ ದಂಡಿಸಲ್ಪಡಬಹುದಾದ ಅಪರಾಧಕ್ಕೆ ಆರೋಪಿಯು ರೂ.5000/-ಗಳನ್ನು ಜುಲ್ಮಾನೆಯಾಗೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಆರೋಪಿಯು ಏಳು ದಿನಗಳ ಕಾಲ ಸಾದಾ ಕಾರಾಗೃಹ ಶಿಕ್ಷೆಯನ್ನು ಅನುಭವಿಸತಕ್ಕದ್ದು.

ಈ ತೀರ್ಪಿನ ಒಂದು ಪ್ರತಿಯನ್ನು ಆರೋಪಿಗೆ ನೀಡತಕ್ಕದ್ದು.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 02.04.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು

**ಅನುಬಂಧ**

**I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-**

ಫ್ರಾಸಾ-1 ಃ ಜಗನ್ನಾಥ
ಫ್ರಾಸಾ-2 ಃ ಸುರೇಶ
ಫ್ರಾಸಾ-3 ಃ ಯಶವಂತ
ಫ್ರಾಸಾ-4 ಃ ಕುಪ್ಪರಾಜ್
ಫ್ರಾಸಾ-5 ಃ ಆನಂದ ಮೂರ್ತಿ
ಫ್ರಾಸಾ-6 ಃ ಸತೀಶ
ಫ್ರಾಸಾ-7 ಃ ಕೆ.ಟಿ ಗುರುರಾಜ್
ಫ್ರಾಸಾ-8 ಃ ತಿಪ್ಪೇಸ್ವಾಮಿ

**II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-**

ನಿ.ಪಿ-1 ಃ ದೂರು
ನಿ.ಪಿ-1(ಎ) ಃ ಫ್ರಾಸಾ.1 ರವರ ಸಹಿ

| | | |
|---|---|---|
| ನಿ.ಪಿ–1(ಬಿ) | ಃ | ಫ್ರಾಸಾ.6 ರವರ ಸಹಿ |
| ನಿ.ಪಿ–2 | ಃ | ಸ್ಥಳ ಮಹಜರ್ |
| ನಿ.ಪಿ–2(ಎ) | ಃ | ಫ್ರಾಸಾ.2 ರವರ ಸಹಿ |
| ನಿ.ಪಿ–2(ಬಿ ) | ಃ | ಫ್ರಾಸಾ.3 ರವರ ಸಹಿ, |
| ನಿ.ಪಿ–2(ಸಿ) | ಃ | ಫ್ರಾಸಾ.4 ರವರ ಸಹಿ |
| ನಿ.ಪಿ–2(ಡಿ) | ಃ | ಫ್ರಾಸಾ.6 ರವರ ಸಹಿ |
| ನಿ.ಪಿ–3 | ಃ | ಕಚ್ಚಾ ನಕಾಶೆ |
| ನಿ.ಪಿ–3(ಎ) | ಃ | ಫ್ರಾಸಾ.2 ರವರ ಸಹಿ |
| ನಿ.ಪಿ–3(ಬಿ ) | ಃ | ಫ್ರಾಸಾ.3 ರವರ ಸಹಿ |
| ನಿ.ಪಿ–3(ಸಿ) | ಃ | ಫ್ರಾಸಾ.4 ರವರ ಸಹಿ |
| ನಿ.ಪಿ–3(ಡಿ) | ಃ | ಫ್ರಾಸಾ.6 ರವರ ಸಹಿ |
| ನಿ.ಪಿ–4 | ಃ | ಪೊಟೋ |
| ನಿ.ಪಿ–5 | ಃ | ಫ್ರಾಸಾ.2 ರವರ ಹೇಳಿಕೆ |
| ನಿ.ಪಿ–6 | ಃ | ಶವ ಪಂಚನಾಮೆ |
| ನಿ.ಪಿ–6(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–7 | ಃ | ಶವ ಪರೀಕ್ಷಾ ವರದಿ |
| ನಿ.ಪಿ–7(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–8 | ಃ | ಐ.ಎಂ.ವಿ ವರದಿ |
| ನಿ.ಪಿ–8(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–9 | ಃ | ಗಾಯದ ಪ್ರಮಾಣ ಪತ್ರ |
| ನಿ.ಪಿ–9(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–10 | ಃ | ಗಾಯದ ಪ್ರಮಾಣ ಪತ್ರ |
| ನಿ.ಪಿ–10(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–11 | ಃ | ಕಲಂ 133 ನೊಟೀಸ್ |
| ನಿ.ಪಿ–11(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–12 | ಃ | ನೊಟೀಸ್ ಗೆ ಉತ್ತ |
| ನಿ.ಪಿ–12(ಎ) | ಃ | ಫ್ರಾಸಾ.5 ರವರ ಸಹಿ |
| ನಿ.ಪಿ–13 | ಃ | ಇಂಡಿಮ್ನಿಟಿ ಬಾಂಡ್ |
| ನಿ.ಪಿ–13(ಎ) | ಃ | ಫ್ರಾಸಾ.5 ರವರ ಸಹಿ |

| | | |
|---|---|---|
| ನಿ.ಪಿ–14 | ಃ | ವಾಹನ ಪಂಚನಾಮೆ |
| ನಿ.ಪಿ–14(ಎ) | ಃ | ಪ್ರಾಸಾ.5 ರವರ ಸಹಿ |
| ನಿ.ಪಿ–14(ಬಿ ) | ಃ | ಪ್ರಾಸಾ.7 ರವರ ಸಹಿ |
| ನಿ.ಪಿ–14(ಸಿ ) | ಃ | ಪ್ರಾಸಾ.8 ರವರ ಸಹಿ |
| ನಿ.ಪಿ–15 | ಃ | ಪ್ರ.ವ ವರದಿ |
| ನಿ.ಪಿ–15(ಎ) | ಃ | ಪ್ರಾಸಾ.6 ರವರ ಸಹಿ |

**III ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

–ಇಲ್ಲಾ–

**IV ಆರೋಪಿತರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

–ಇಲ್ಲಾ–

**V ಅಭಿಯೋಜನಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit **ecourts.gov.in** for updates or download mobile app "**eCourts Services**" from Android or iOS

SUJATHA SUVARNA B Digitally signed by SUJATHA SUVARNA B Date: 2026.04.08 15:48:16 +0530